ವಿಷಯ:- ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ವಿದ್ಯಾರ್ಥಿ ವಸತಿ ನಿಲಯಗಳು.

22(127)

ಶ್ರೀ ಬಿ.ಬಿ. ಚಿಮ್ಮನಕಟ್ಟಿ:- ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯದಲ್ಲಿ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧೀನದಲ್ಲಿ ಯಾವ ಯಾವ ಸ್ಥಳಗಳಲ್ಲಿ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್‌ನಂತರದ ಬಾಲಕರ ಮತ್ತು ಬಾಲಕಿಯರ ವಸತಿ ನಿಲಯಗಳಿವೆ; ಇವುಗಳಲ್ಲಿ ಎಷ್ಟು ಸ್ವಂತ ಕಟ್ಟಡಗಳನ್ನು ಹೊಂದಿವೆ. ಖಾಸಗಿ ಕಟ್ಟಡಗಳ ಬಾಡಿಗೆಗಾಗಿ ಸರ್ಕಾರ ವ್ಯಯ ಮಾಡುತ್ತಿರುವ ಹಣದ ಮೊತ್ತವೆಷ್ಟು;

ಆ) ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ವಸತಿ ಶಾಲೆಗಳನ್ನು ಪ್ರಾರಂಭಿಸಿದೆ;

ಇ) ಇದಕ್ಕಾಗಿ ಸರ್ಕಾರವು ಎಷ್ಟು ಹಣ ವಿನಿಯೋಗಿಸಲಾಗಿದೆ?

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು):-

ಅ) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧೀನದಲ್ಲಿ 993 ಮೆಟ್ರಿಕ್ ಪೂರ್ವ ಹಾಗೂ 157 ಮೆಟ್ರಿಕ್‌ನಂತರದ ವಿದ್ಯಾರ್ಥಿ ನಿಲಯಗಳಿದ್ದು ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ.

407 ವಿದ್ಯಾರ್ಥಿನಿಲಯಗಳು ಸ್ವಂತ ಕಟ್ಟಡಗಳನ್ನು ಹೊಂದಿವೆ.

ರೂ. 88.80 ಲಕ್ಷಗಳು (ವಾರ್ಷಿಕ)

ಆ) ರಾಜ್ಯದಲ್ಲಿ ಈವರೆಗೂ 8 ನವೋದಯ ಮಾದರಿ ವಸತಿ ಶಾಲೆಗಳನ್ನು ಹಾಗೂ 9 ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗಳನ್ನು ಮಂಜುರು ಮಾಡಿದ್ದು 8 ನವೋದಯ ಮಾದರಿ ವಸತಿ ಶಾಲೆಗಳು ಪ್ರಾರಂಭವಾಗಿರುತ್ತದೆ. ಪಟ್ಟಿಯನ್ನು ಅನುಬಂಧ-2 ರಲ್ಲಿ ಲಗತ್ತಿಸಲಾಗಿದೆ.

ಇ) ಪ್ರಸಕ್ತ ಸಾಲಿನಲ್ಲಿ ಈ ಬಾಬ್ತಿಗಾಗಿ ರೂ. 100 ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಿದ್ದು, ಈವರೆವಿಗೆ ರೂ. 70.35 ಲಕ್ಷಗಳನ್ನು ವಿನಿಯೋಗಿಸಲಾಗಿದೆ.

ಅನುಬಂಧ-2

1. ನವೋದಯ ಮಾದರಿ ವಸತಿ ಶಾಲೆಗಳ ವಿವರ:

ಕ್ರಮ ಸಂಖ್ಯೆ	ವಸತಿ ಶಾಲೆಯ ಸ್ಥಳ
1.	ಮುಳಖೇಡ, ಸೇಡಂ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ
2.	ಜೇವರ್ಗಿ, ಜೇವರ್ಗಿ ತಾ: ಗುಲ್ಬರ್ಗಾ ಜಿಲ್ಲೆ
3.	ಹಿಡ್ಕಲ್ ಡ್ಯಾಂ ನೈಟ್ ಹುಕ್ಕೇರಿ ತಾ: ಬೆಳಗಾಂ ಜಿಲ್ಲೆ
4.	ಅಡಕಮಾರನಹಳ್ಳಿ, ಬೆಂಗಳೂರು ನಗರ ಜಿಲ್ಲೆ
5.	ಶ್ರೀರಂಗಪಟ್ಟಣ, ಶ್ರೀರಂಗಪಟ್ಟಣ ತಾ: ಮಂಡ್ಯ ಜಿಲ್ಲೆ
6.	ಹೊರ್ತಿ, ಇಂಡಿ ತಾ: ಬಿಜಾಪುರ ಜಿಲ್ಲೆ
7.	ಮುಧೋಳ್ ಮುಧೋಳ ತಾ: ಬಿಜಾಪುರ ಜಿಲ್ಲೆ
8.	ಮೊದಲಘಟ್ಟ ಹೂವಿನಹಡಗಲಿ ತಾ: ಬಳ್ಳಾರಿ ಜಿಲ್ಲೆ

2. ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗಳ ವಿವರ:

1.	ಕೂಗನೂರು ಅಫಜಲಪುರ ತಾ: ಗುಲ್ಬರ್ಗಾ ಜಿಲ್ಲೆ
2.	ಹರಿಹರಪುರ ಹೊಳೆನರಸೀಪುರ ತಾ: ಹಾಸನ ಜಿಲ್ಲೆ
3.	ಗುರುಮಾರನಹಳ್ಳಿ ಚನ್ನರಾಯಪಟ್ಟಣ ತಾ: ಹಾಸನ ಜಿಲ್ಲೆ
4.	ಜಾಲಹಳ್ಳಿ ದೇವದುರ್ಗ ತಾ: ರಾಯಚೂರು ಜಿಲ್ಲೆ
5.	ಬಗದಲ್ ಬೀದರ್ ಜಿಲ್ಲೆ
6.	ದೇವರಗುಡ್ಡ ಬೆಳ್ತಂಗಡಿ ತಾ: ದಕ್ಷಿಣ ಕನ್ನಡ ಜಿಲ್ಲೆ
7.	ಕಲ್ಲಿಹಾಳ, ಭದ್ರಾವತಿ ತಾ: ಶಿವಮೊಗ್ಗ ಜಿಲ್ಲೆ
8.	ಮಾಗೋಡುಫಾಲ್ಸ್ ಎಲ್ಲಾಪುರ ತಾ: ಉತ್ತರ ಕನ್ನಡ ಜಿಲ್ಲೆ
9.	ಸವಣೂರು ಸವಣೂರು ತಾ: ಧಾರವಾಡ ಜಿಲ್ಲೆ

ಅನುಬಂಧ

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಅಧೀನದಲ್ಲಿ ಬರುವ ಮೆಟ್ರಿಕ್‌ಪೂರ್ವ ಮತ್ತು ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯಗಳ ಜಿಲ್ಲಾವಾರು ವಿವರ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಸಂಖ್ಯೆ			ಮೆಟ್ರಿಕ್‌ನಂತರದ ವಿದ್ಯಾರ್ಥಿ ನಿಲಯಗಳ ಸಂಖ್ಯೆ		
		ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು
1	2	3	4	5	6	7	8
1.	ಬೆಂಗಳೂರು (ನಗರ)	12	3	15	6	2	8
2.	ಬೆಂಗಳೂರು (ಗ್ರಾ)	32	6	38	3	-	3
3.	ಬಳ್ಳಾರಿ	29	5	34	6	1	7
4.	ಬೆಳಗಾಂ	70	7	77	6	2	8
5.	ಬೀದರ್	34	2	36	2	1	3
6.	ಬಿಜಾಪುರ	64	4	68	5	2	7
7.	ಚಿಕ್ಕಮಗಳೂರು	32	8	40	4	3	7
8.	ಚಿತ್ರದುರ್ಗ	52	5	57	3	1	4
9.	ದಕ್ಷಿಣ ಕನ್ನಡ	39	6	45	6	7	13
10.	ಧಾರವಾಡ	73	6	79	5	5	10
11.	ಗುಲ್ಬರ್ಗಾ	82	4	86	6	3	9

1	2	3	4	5	6	7	
12.	ಹಾಸನ	40	3	43	5	2	7
13.	ಕೊಡಗು	16	2	18	2	1	3
14.	ಕೋಲಾರ	50	7	57	6	3	9
15.	ಮಂಡ್ಯ	30	6	36	7	3	10
16.	ಮೈಸೂರು	47	4	51	6	3	9
17.	ರಾಯಚೂರು	50	5	55	6	3	9
18.	ಶಿವಮೊಗ್ಗ	51	9	60	9	6	15
19.	ತುಮಕೂರು	42	4	46	5	2	7
20.	ಉತ್ತರ ಕನ್ನಡ	42	10	52	4	5	9
	ಒಟ್ಟು	887	106	993	102	55	157

ಶ್ರೀ ಬಿ.ಬಿ. ಚಿಮ್ಮನಕಟ್ಟಿ:- ಮಾನ್ಯ ಅಧ್ಯಕ್ಷರೆ, ನನ್ನ 'ಅ' ಪ್ರಶ್ನೆಯಲ್ಲಿ 993 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು ಹಾಗೂ 157 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ವಸತಿ ಶಾಲೆಗಳ ಕಟ್ಟಡವನ್ನು ಕಟ್ಟುವ ಬಗ್ಗೆ ಕೇಳಿದ್ದೇನೆ. ಅದರಲ್ಲಿ 407 ವಸತಿ ನಿಲಯಗಳು ಸ್ವಂತ ಕಟ್ಟಡವನ್ನು ಹೊಂದಿವೆ. ಅಂದರೆ, ಸುಮಾರು 743 ಹಾಸ್ಟೆಲ್‌ಗಳಿಗೆ ಸ್ವಂತ ಕಟ್ಟಡಗಳು ಇಲ್ಲದೆ ಮತ್ತು ಇನ್ನೂ ಅನೇಕ ಕಾರಣಗಲಿಂದ ಆ ವಿದ್ಯಾರ್ಥಿನಿಲಯಗಳು ಸರಿಯಾಗಿ ನಡೆಯುತ್ತಿಲ್ಲ. ಆ ದೃಷ್ಟಿ ಇಟ್ಟುಕೊಂಡು 743 ವಸತಿ ಶಾಲೆಗಳ ಕಟ್ಟಡಗಳನ್ನು ಕಟ್ಟುವುದಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ? ಪ್ರತಿ ವರ್ಷ 88 ಲಕ್ಷ ರೂಪಾಯಿಗಳಮತೆ ಕೊಡುತ್ತಾ ಹೋದರೆ ಈ ಕಟ್ಟಡಗಳನ್ನೆಲ್ಲಾ ಕಟ್ಟುವುದಕ್ಕೆ ಕನಿಷ್ಟ ಏಳೆಂಟು ವರ್ಷಗಳಾದರೂ ಬೇಕೇನೋ ಎಂದು ಅನ್ನಿಸುತ್ತದೆ. ಅದಕ್ಕಾಗಿ ಕಟ್ಟಡವನ್ನು ಕಟ್ಟುವುದಕ್ಕಾಗಿ ಹೆಚ್ಚಿನ ಹಣವನ್ನು ಕೊಡುವ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:- ಮಾನ್ಯ ಅಧ್ಯಕ್ಷರೆ, ಈಗಾಗಲೇ 407 ವಸತಿ ನಿಲಯಗಳ ಕಟ್ಟಡಗಳನ್ನು ಕಟ್ಟಲಾಗಿದೆ. ಇನ್ನೂ ಎರಡು ನೂರು ಹೊಸ ಕಟ್ಟಡಗಳು ವಿವಿಧ ಹಂತದಲ್ಲಿ ಇವೆ. ಈ ವರ್ಷದಲ್ಲಿ ಈ ಎರಡೂ ನೂರು ಕಟ್ಟಡಗಳ ಕೆಲಸವನ್ನು ಮುಗಿಸಲಾಗುತ್ತದೆ. ಹಾಗೂ ಈ ವರ್ಷ ಕೂಡ ಹೊಸದಾಗಿ 50 ವಸತಿ ನಿಲಯಗಳ ಕಟ್ಟಡಗಳನ್ನು ಕಟ್ಟುವುದಕ್ಕೆ ಮಂಜೂರಾತಿ ಕೊಡಲಾಗಿದೆ. ಈ ಬಾಬಿಗಾಗಿ 10 ಕೋಟಿ ರೂಪಾಯಿಗಳನ್ನು ಸರ್ಕಾರ ಇಟ್ಟಿದೆ. ಇನ್ನು ಎರಡು ವರ್ಷಗಳಲ್ಲಿ ಈ ಎಲ್ಲಾ ಕೆಲಸಗಳು ಮುಗಿಯುವ ಹಾಗೆ ಕಾರ್ಯಕ್ರಮ ಕೈಗೊಂಡಿದ್ದೇವೆ. ಇದರ ಜೊತೆಗೆ ಪ್ರೀ ಮೆಟ್ರಿಕ್‌ಗೆ 250 ರೂಪಾಯಿ ಇದ್ದದ್ದನ್ನು 350 ರೂಪಾಯಿ ಮಾಡಿದ್ದೇವೆ. ಮೆಟ್ರಿಕ್ ನಂತರದ ವಸತಿ ಶಾಲೆಗಳಲ್ಲಿ 300 ರೂಪಾಯಿ ಇದ್ದದ್ದನ್ನು 400 ರೂಪಾಯಿ ಮಾಡಿದ್ದೇವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಸತಿ ಶಾಲೆಗಳು ಯಾವ ರೀತಿ ಇವೆಯೋ ಅದೇ ಮಾದರಿಯಲ್ಲಿ ತಾರತಮ್ಯವನ್ನು ಸರಿಪಡಿಸಿ ಈ ವಸತಿ ನಿಲಯಗಳ ಬಗ್ಗೆಯೂ ಕಾರ್ಯಕ್ರಮ ಹಾಕಿಕೊಂಡಿದ್ದೇವೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ:- ನಮ್ಮ ಬಾದಾಮಿಯು ಐತಿಹಾಸಿಕ ಸ್ಥಲವಾಗಿರುವುದರಿಂದ ಹೆಚ್ಚಿನ ಮುತುವರ್ಜಿ ವಹಿಸಿ ಈ ಸ್ಥಳದಲ್ಲಿ ಮುರಾರ್ಜಿ ದೇಸಾಯಿ ವಸತಿ ಶಾಲೆ ಅಥವಾ ನವೋದಯ ವಸತಿ ಶಾಲೆಯನ್ನು 1997-98ರ ಸಾಲಿನಲ್ಲಿ ಮಂಜೂರು ಮಾಡುವುದಕ್ಕೆ ಸರ್ಕಾರ ಮನಸ್ಸು ಮಾಡುತ್ತದೆಯಾ ಎಂದು ದಯವಿಟ್ಟು ತಿಳಿಸಬೇಕು.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:- ನಾವು 9ಕ್ಕೆ ಮಂಜೂರಾತಿಯನ್ನು ಕೊಟ್ಟಿದ್ದೇವೆ. ಒಂದು ಮಾಗೋಡು ಫಾಲ್ಸ್‌ನಲ್ಲಿ ಪ್ರಾರಂಭವಾಗಿದೆ. ಈಗಾಗಲೇ ಬಿಜಾಪುರದಲ್ಲಿ ಒಂದು ನಡೆಯುತ್ತಾ ಇದೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಇಂಥ ಒಂದು ಶಾಲೆಯನ್ನು ಪ್ರಾರಂಭ ಮಾಡಬೇಕೆಂದು ನಾವು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಮುಂದೆ ಅದರ ಬಗ್ಗೆ ಪರಿಶೀಲಿಸಿ, ಅಲ್ಲಿ ಅವಶ್ಯಕತೆ ಇದ್ದರೆ ಆ ಕಾರ್ಯಕ್ರಮವನ್ನು ರೂಪಿಸುತ್ತೇವೆ ಎಂಬ ಭರವಸೆಯನ್ನು ಕೊಡಬಯಸುತ್ತೇನೆ.

ಶ್ರೀ ಅರಗಜ್ಞಾನೇಂದ್ರ:- ಸನ್ಮಾನ್ಯ ಅಧ್ಯಕ್ಷರೇ, ವಿದ್ಯಾರ್ಥಿಗಳ ಊಟದ ವ್ಯವಸ್ಥೆಗೋಸ್ಕರ ಹಣವನ್ನು ಜಾಸ್ತಿ ಮಾಡಿದ್ದಕ್ಕಾಗಿ ಮಾನ್ಯ ಸಚಿವರನ್ನು ಅಭಿನಂದಿಸುತ್ತೇನೆ. ಈ ಹಾಸ್ಟೆಲ್ ಕಟ್ಟಡಗಳನ್ನು ವರ್ಷದಲ್ಲಿ 50ರ ಪ್ರಕಾರ ಮಾಡುತ್ತಾ ಹೋದರೆ 700 ಕಟ್ಟಡಗಳನ್ನು ಎಷ್ಟು ವರ್ಷಗಳಲ್ಲಿ ಮುಗಿಸಬಹುದು? ಈಗಾಗಲೇ ಮಕ್ಕಳಿಗೆ ವಸತಿ ವ್ಯವಸ್ಥೆಯು ಸರಿಯಾಗಿಲ್ಲದೆ, ಮಲಗಲು, ಏಳಲು ಕೂಡ ಗತಿ ಇಲ್ಲದೆ ಇವೊತ್ತು ಹಾಸ್ಟೆಲ್‌ಗಳಲ್ಲಿ ಅಟೆಂಡೆನ್ಸ್ ಕಡಿಮೆಯಾಗಿ, ಹಾಸ್ಟೆಲ್‌ನ ಸಹವಾಸವೇ ಬೇಡ ಎಂದು ಮಕ್ಕಳು ಹಾಸ್ಟೆಲ್ ಬಿಟ್ಟದನ ಕಾಯುತ್ತಿದ್ದಾರೆ. ಆದ್ದರಿಂದ ಕಟ್ಟಡಗಳಿಗಾಗಿ ಸರಕಾರದ ವತಿಯಿಂದ ಹೆಚ್ಚು ಅನುದಾನವನ್ನು ಕೊಟ್ಟು ಕೇವಲ ವರ್ಷಕ್ಕೆ 50 ಕಟ್ಟಡಗಳಲ್ಲ ಜಾಸ್ತಿ ಕಟ್ಟಡಗಳನ್ನು ನಿರ್ಮಾಣ ಮಾಡುವ ಹಾಗೆ ಆದರೆ ಮಾತ್ರ ಈ ಸಮಸ್ಯೆಯು ಪರಿಹಾರವಾಗುತ್ತದೆ ಎಂದು ಹೇಳಬಯಸುತ್ತೇನೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:- ಮಾನ್ಯ ಅಧ್ಯಕ್ಷರೇ, ರಾಜ್ಯ ವಲಯದಿಂದ 50 ಎಂದು ನಾನು ಹೇಳಿದ್ದೇನೆ. ಇನ್ನು ಜಿಲ್ಲಾ ವಲಯದಿಂದ ಜಿಲ್ಲಾ ಪರಿಷತ್‌ನವರು ಕೂಡ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಹೀಗೆ ಒಟ್ಟು 200 ಕಟ್ಟಡಗಳು ಕಾರ್ಯರೂಪದಲ್ಲಿವೆ. ಅವುಗಳು ಮುಗಿಯಲಿಲ್ಲವಾದ ಕಾರಣ ಅದರ ಅಂಕಿಅಂಶಗಳನ್ನು ನಾನು ಇಲ್ಲಿ ಕೊಟ್ಟಿಲ್ಲ. ಆ ಕಟ್ಟಡಗಳು ಕೇವಲ 6 ತಿಂಗಳುಗಳಲ್ಲಿಯೇ ಮುಗಿಯುವ ಹಂತದಲ್ಲಿರುವದರಿಂದ ನಿರ್ದಿಷ್ಟವಾಗಿ ಹೇಳಿಲ್ಲ. ಇನ್ನು ಮಾನ್ಯ ಶಾಸಕರುಗಳು ಕೂಡ ಜಿಲ್ಲಾ ಪರಿಷತ್‌ನಲ್ಲಿ ಸದಸ್ಯರಾಗಿರುವುದರಿಂದ ಈ ಜಿಲ್ಲಾ ವಲಯದ ಬಾಬಿಗೆ ಹೆಚ್ಚು ಹಣವನ್ನು ಒದಗಿಸಿಕೊಡುವ ಬಗ್ಗೆ ಪ್ರಯತ್ನಿಸಬೇಕೆಂದು ವಿಜ್ಞಾಪಿಸಿಕೊಳ್ಳುತ್ತೇನೆ. ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯು ಜಿಲ್ಲಾ ಪಂಚಾಯತ್‌ನವರಿಗೂ ಸಂಬಂಧಪಟ್ಟಿರುವುದರಿಂದ ಅವರೂ ಕೂಡ ಕಾರ್ಯಕ್ರಮವನ್ನು ರೂಪಿಸಬೇಕಾಗುತ್ತದೆ. ರಾಜ್ಯ ವಲಯದಲ್ಲಿ ಮಾತ್ರ ನಾವು ಆ ಕಾರ್ಯಕ್ರಮವನ್ನು ಹಾಕಿಕೊಳ್ಳುವುದಕ್ಕೆ ಆಗುವುದಿಲ್ಲ. ಅವರು ನಾವು ಸೇರಿ ಸಮನಾಗಿ ಈ ಕಾರ್ಯಕ್ರಮವನ್ನು ತೆಗೆದುಕೊಂಡರೆ ಒಂದೆರೆಡು ವರ್ಷಗಳಲ್ಲಿ ಈ ಕಾರ್ಯಕ್ರಮವನ್ನು ಮುಗಿಸಬಹುದಾಗಿದೆ.

ಶ್ರೀ ಚಂದ್ರಪ್ಪ:- ಮಾನ್ಯ ಅಧ್ಯಕ್ಷರೇ, ನಮ್ಮ ಸರಕಾರದವರು ವಿದ್ಯಾರ್ಥಿಗಳಿಗೆ ಕೊಡುವ ಹಣದಲ್ಲಿ 300 ರೂಪಾಯಿಯಿಂದ 400ಕ್ಕೆ ಏರಿಸಿರುವುದು ಹೆಚ್ಚು ಎಂದೇನೂ ಅಲ್ಲ. ನಮ್ಮ ಕಾರಾಗೃಹದೊಳಗಿರತಕ್ಕಂಥ ಕೈದಿಗಳಿಗೆ 200 ಗ್ರಾಂ ಅಕ್ಕಿ, 300 ಗ್ರಾಂ ಮಾಂಸ, 100 ಗ್ರಾಂ ಬೇಳೆ ಮುಂತಾಗಿ ಕೊಡುತ್ತಾ ಇದ್ದಾರೆ. ಹೀಗೆ ಪ್ರತಿಯೊಬ್ಬ ಕೈದಿಗೆ ತಿಂಗಳಿಗೆ ಒಂದ ರಿಂದ ಒಂದೂವರೆ ಸಾವಿರ ರೂಪಾಯಿಗಳ ವರೆಗೆ ಖರ್ಚು ಮಾಡುತ್ತಾ ಇದ್ದಾರೆ. ಆದ್ದರಿಂದ ಈ ಮಕ್ಕಳಿಗೆ 400 ರೂಪಾಯಿಗಳ ವರೆಗೆ ಕೊಡತಕ್ಕಂಥಾದ್ದು ದೊಡ್ಡದೇನಲ್ಲ. ಹಾಗೆಯೇ ಆ ಮಕ್ಕಳಿಗೆ ಪ್ರತಿ ತಿಂಗಳೂ ಎಷ್ಟು ಖರ್ಚು ಬರುತ್ತದೆಯೋ ಅಷ್ಟನ್ನೂ ಸರಕಾರದವರು ಕೊಡಬೇಕೆಂದು ತಮ್ಮ ಮೂಲಕ ಸರಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:- ಈ ಬಗ್ಗೆ ಪರಿಶೀಲಿಸಿ ಕ್ರಮವನ್ನು ತೆಗೆದುಕೊಳ್ಳುತ್ತೇನೆ.